ಶ್ರೀ ಕೆ. ಹೆಚ್. ಶ್ರೀನಿವಾಸ್.— ಕಳೆದ ಅಧಿವೇಶನದ ಸಂದರ್ಭದಲ್ಲಿ ಮಂಡಲ್ ಪಂಚಾಯಿತಿಗಳ ಕ್ಷೇತ್ರ ವಿಂಗಡಣೆಯ ಬಗ್ಗೆ ಅನುಸರಿಸುವ ಕ್ರಮದ ಬಗ್ಗೆ ಶಾಸಕರನ್ನು ರಾಜಕೀಯ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆ ಭರವಸೆಯನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾರೆ. ಸರ್ಕಾರಿ ಅಧಿಕಾರಿಗಳು ಕೂಡ ಒಂದು ಗೊಂದಲಕ್ಕೊಳಗಾಗಿ ಏನೋ ಒಂದು ರೀತಿಯಲ್ಲಿ ಕ್ಷೇತ್ರ ವಿಂಗಡಣೆ ಮಾಡಿದ್ದಾರೆ. ನಾವು ಕೊಟ್ಟ ಸಲಹೆಗಳಿಗೂ, ಅವರು ಮಾಡಿದ್ದಕ್ಕೂ ಅರ್ಥಾತ್ ಸಂಬಂಧವಿಲ್ಲ.

ಅಧ್ಯಕ್ಷರು.— ಆ ರೀತಿ ಏನಾದರೂ ಆಗಿದ್ದರೆ ನೀವು ಬರೆದು ಕಳುಹಿಸಿಕೊಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಸ್ವಲ್ಪ ವ್ಯತ್ಯಾಸ ಆಗಿದ್ದರೆ ಬರೆದು ಕಳುಹಿಸಬಹುದಾಗಿತ್ತು. ನಾವು ಹೇಳಿದ್ದಕ್ಕೂ ಅವರು ಮಾಡಿದ್ದಕ್ಕೂ ಒಂದಕ್ಕೊಂದು ಸಂಬಂಧವಿಲ್ಲ. ಪೂರ್ವ ನಿಯೋಜಿತವಾಗಿ ಹೇಗೆ ಬೇಕೋ ಹಾಗೆ ಮಾಡಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ, ಇದರ ಬಗ್ಗೆ ಸಮರ್ಪಕವಾದ ಚರ್ಚೆ ಇಲ್ಲಿ ಆಗಬೇಕಾದ್ದು ಅಗತ್ಯ ಇದೆ, ಅದಕ್ಕೆ ಒಪ್ಪಿಗೆ ಕೊಡಬೇಕು.

ಶ್ರೀ ಬಿ ಆರ್. ಯಾವಗಲ್.— ಮಾನ್ಯ ಸದಸ್ಯರು ಯಾವುದೇ ರೀತಿಯಿಂದ ರಾಜಕೀಯ ಪಕ್ಷಗಳನ್ನು ಮತ್ತು ಶಾಸಕರನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಮಾಡಿಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದುದು. ಇದನ್ನು ಜಾರಿ ಮಾಡುವ ಹಂತದಲ್ಲಿ ಕೆಲವು ರೀತಿಯ ಸಮಸ್ಯೆಗಳಿಂದ ಅಡಚಣೆ ಯಾದದ್ದು ನಿಜ. ೧೯೭೧–೮೧ರ ಸೆನ್‌ಸಸ್ ವಿಚಾರದ ಬಗ್ಗೆ ಬಿಟ್ಟರೆ ಬೇರೆ ಯಾವುದೇ ರೀತಿಯ ಅಸ್ಪಷ್ಟ ನಿಲುವು ಇರಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಅಧ್ಯಕ್ಷರೆ, ...

ಅಧ್ಯಕ್ಷರು.— ಇದು ಚರ್ಚೆ ಅಲ್ಲ, ತಾವು ಸಜಾವೆ ಸಪ್ಲಿಮೆಂಟರಿ ಕೇಳಲಿಕ್ಕೆ ಅವಕಾಶ ಮಾಡಿ ಕೊಟ್ಟಿದ್ದೆ, ಈಗ ಸಮಯ ಆಗುತ್ತಿದೆ, ದಯಮಾಡಿ ಕುಳಿತುಕೊಳ್ಳಿ. ಈಗ ಅರ್ಧ ಗಂಟೆಯಲ್ಲಿ ೧೦ ಪ್ರಶ್ನೆಗಳು ಮುಗಿಯಲೇ ಬೇಕು, ನನಗೆ ಜವಾಬ್ದಾರಿ ಇದೆ, ನನಗೆ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡ ಬೇಕೆಂಬ ಉದ್ದೇಶ ಇಲ್ಲ ತಾವು ಒಳ್ಳೆಯ ಪ್ರಶ್ನೆಗಳನ್ನು ಕೇಳುತ್ತೀರಿ ಎಂದು ಅವಕಾಶ ಮಾಡಿಕೊಟ್ಟರೆ ಕಾಂಪ್ಲಿಕೇಟ್ ಮಾಡಲಿಕ್ಕೆ ಹೊರಟಿದ್ದೀರಿ. ದಯಮಾಡಿ ಕುಳಿತುಕೊಳ್ಳಬೇಕು. ಈ ಪ್ರಶ್ನೆಯನ್ನೆ ಅರ್ಧ ಗಂಟೆ ಕಾಲದ ಚರ್ಚೆಗೆ ಬೇಕಾದರೆ ಹಾಕಿ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಬೇಕು.

ಗೆಜೆಟೆಡ್ ಮುಖ್ಯೋಪಾಧ್ಯಾಯರುಗಳಿಗೆ ವಿದ್ಯಾಧಿಕಾರಿಗಳಾಗಿ ಬಡ್ತಿ.

೨೯. ಶ್ರೀ ಬಿ, ಎಸ್. ಯಡಿಯೂರಪ್ಪ.— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದಿನ ವಿಜ್ಞಾನಗಾರಿಕಾ ಪ್ರೌಢಶಾಲೆಗಳನ್ನು ಸರ್ಕಾರಿ ಆಜ್ಞೆಯಂತೆ ದಿನಾಂಕ, ೧–೪–೭೫ ರಿಂದ ವಿದ್ಯಾ ಇಲಾಖೆಗೆ ವರ್ಗಾಯಿಸಿರುವುದು ನಿಜವೆ ?

ಆ) ದಿನಾಂಕ, ೨೧–೧–೧೯೭೧ರವರೆಗೆ ರಾಜ್ಯ ಪತ್ರಾಂಕಿತ ದರ್ಜೆಯ ಮುಖ್ಯೋಪಾಧ್ಯಾಯರು ಗಳಿಗೆ ವಿದ್ಯಾಧಿಕಾರಿಗಳಾಗಿ ಬಡ್ತಿ ನೀಡಲು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರವರು ಶಿಕ್ಷಣ ಇಲಾಖೆ ಕಾರ್ಯದರ್ಶಿಗಳಿಗೆ ಇತ್ತೀಚೆಗೆ ಪಟ್ಟಿ ಕಳುಹಿಸಿರುವುದು ನಿಜವೆ.

ಇ) ಹಾಗಿದ್ದಲ್ಲಿ ದಿನಾಂಕ, ೨೧–೧–೧೯೭೧ರ ಮೊದಲೆ ರಾಜ್ಯ ಪತ್ರಾಂಕಿತ ಮುಖ್ಯೋಪಾಧ್ಯಾಯ ರಾಗಿ ಸೇವೆ ಸಲ್ಲಿಸುತ್ತಿದ್ದ, ಶ್ರೀ ಐ. ಎಲ್. ಮಿತ್ತಂತ್ತಾಯ, ಮುಖ್ಯೋಪಾಧ್ಯಾಯ, ಮಂಜೇಶ್ವರ, ದಕ್ಷಿಣ ಕನ್ನಡ ಹಾಗೂ ಶ್ರೀ ಯು. ರಾಘವೇಂದ್ರ ಐತಾಳ್, ಉಪನ್ಯಾಸಕರು, ಸರಕಾರಿ ಶಿಕ್ಷಣ ಮಹಾ ವಿದ್ಯಾಲಯ, ಮಂಗಳೂರು, ಇವರ ಹೆಸರನ್ನು ಈ ಪಟ್ಟಿಯಲ್ಲಿ ಕೈಬಿಟ್ಟಿರುವುದು ನಿಜವೆ, ಹಾಗಿದ್ದಲ್ಲಿ ಆದಕ್ಕೆ ಕಾರಣವೇನು ಹಾಗೂ ಉದ್ದೇಶಪೂರ್ವಕವಾಗಿ ಕೈ ಬಿಟ್ಟಿದ್ದರೆ ಅಂತಹ ಅಧಿಕಾರಿಗಳ ಮೇಲೆ ಸರಕಾರದವರು ಕ್ರಮ ಕೈಕೊಳ್ಳುವರೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ನಿಜ.

ಆ) ನಿಜ.

ಇ) ಉಲ್ಲೇಖಿತ ಅಧಿಕಾರಿಗಳ ಹೆಸರುಗಳನ್ನು ಮುಂಬಡ್ತಿಯ ಪಟ್ಟಿಯಿಂದ ಕೈಬಿಟ್ಟಿರುವುದಿಲ್ಲ. ಆದ್ದರಿಂದ, ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ರಾಜ್ಯ ಪತ್ರಾಂಕಿತ ಮುಖ್ಯೋಪಾಧ್ಯಾಯರುಗಳಿಗೆ ವಿದ್ಯಾಧಿಕಾರಿಗಳಾಗಿ ಬಡ್ತಿ ಕೊಡುವಂಥ ಒಂದು ಪಟ್ಟಿಯನ್ನು ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಿಗೆ ಕಳುಹಿಸುವಾಗ ಅದರಲ್ಲಿ ನಮೂದಿಸಲಾದ ಕೆಲವು ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರ ಹೆಸರನ್ನು ಕೈಬಿಟ್ಟಿರುವ ಬಗ್ಗೆ ತಮಗೂ ಕೂಡ ಪತ್ರ ಬರೆದಿದ್ದೆನು. ಆ ಪಟ್ಟಿ ಕಳುಹಿಸುವಾಗ ಇವರ ಹೆಸರು ಸೇರಿಸ್ಕೊ ಇಲ್ಲವೋ, ಆಮೇಲೆ ಸೇರಿಸಿದ್ದರೆ ಸೀನಿಯಾರಿಟಿ ಧಕ್ಕೆಯಾಗದಂತೆ ಅವರಿಗೆ ಪ್ರಮೋಷನ್ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.— ಕಾನೂನು ಪ್ರಕಾರ ಯಾರಿಗೂ ಅನ್ಯಾಯವಾಗದಂತೆ ಕ್ರಮ ತೆಗೆದುಕೊಳ್ಳುತ್ತೇನೆ.

ಮಂಡಲ ಪಂಚಾಯತ್ ರಚನೆಗೆ ನಿಧಿಸಲಾದ ಜನ ಸಂಖ್ಯೆಯ ಮಿತಿ.

೪೬. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಯನ್ನು ಮಂಡಲ್ ಪಂಚಾಯತ್ ಆಗಿ ಪರಿವರ್ತಿಸುವ ಬಗ್ಗೆ ಸರ್ಕಾರದವರ ಉದ್ದೇಶವಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಇ) ಮಂಡಲ ಪಂಚಾಯತ್ ರಚನೆಗೆ ವಿಧಿಸಲಾದ ಜನಸಂಖ್ಯೆಯ ಮಿತಿಯನ್ನೇ ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಲು ಅನ್ವಯಿಸಲಾಗುವುದೇ ?

ಈ) ಹಾಗಿಲ್ಲದಿದ್ದರೆ ಅದಕ್ಕೆ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ.

ಆ) ಸರ್ಕಾರ ಹತ್ತು ಸಾವಿರ ಮತ್ತು ಅದಕ್ಕಿಂತಲೂ ಕಡಿಮೆ ಜನಸಂಖ್ಯೆಯುಳ್ಳ ಪುರಸಭೆಗಳನ್ನು ಮಾತ್ರ ಮಂಡಲಗಳನ್ನಾಗಿ ಪರಿವರ್ತಿಸಿರುವುದರಿಂದ ಬೈಂದೂರು ಪುರಸಭೆಯನ್ನು ಮಂಡಲವನ್ನಾಗಿ ಮಾಡಿಲ್ಲ.

ಇ) ಇಲ್ಲ.

ಈ) ಕಾರಣಗಳು (ಆ)ನಲ್ಲಿ ಉತ್ತರಿಸಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ ಶ್ರೀ ಜಿ. ಎನ್. ಆಚಾರ್ ಪರವಾಗಿ.—(ಮಾನ್ಯ ಅಧ್ಯಕ್ಷರೇ, ಹೊಸದಾಗಿ ಮಂಡಲ ಪಂಚಾಯ್ತಿಗಳಿಗೆ ಕ್ಷೇತ್ರ ವಿಂಗಡಣೆ ಮಾಡಬೇಕಾದರೆ ೮ ರಿಂದ ೧೨ ಸಾವಿರದವರಿಗೆ ಜನಸಂಖ್ಯೆಯನ್ನು ಮಾನದಂಡವನ್ನಾಗಿ ತೆಗೆದುಕೊಂಡಿದೆ. ಬೈಂದೂರು ಮುನಿಸಿಪಾಲಿಟಿಯಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿದೆಯೆಂದೂ, ಅದನ್ನು ಮಂಡಲ್ ಪಂಚಾಯ್ತಿಯನ್ನಾಗಿ ಮಾಡಂವುದಕ್ಕೆ ಆಗುವುದಿಲ್ಲವೆಂದೂ ತಿಳಿಸಿರುವುದು ಆಶ್ಚರ್ಯವಾಗಿದೆ. ಬೈಂದೂರು ಮುನಿಸಿಪಾಲಿಟಿ ವಿರಿಯಾದಲ್ಲಿ ಪರಿಶಿಷ್ಟ ಜನಾಂಗದವರು, ಪರಿಶಿಷ್ಟ ವರ್ಗದವರು ಹೆಚ್ಚಿಗೆ ಇರುವುದರಿಂದ, ಮತ್ತು ಅವರ ಅಭಿವೃದ್ಧಿಯ ದೃಷ್ಟಿಯಿಂದ ಬೈಂದೂರು ಮುನಿಸಿಪಾಲಿಟಿಯನ್ನು ಮಂಡಲ್ ಪಂಚಾಯ್ತಿಯನ್ನಾಗಿ ಮಾಡುತ್ತೀರಾ ?